INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-6, Issue -1, January-February, 2024,
PageNo,19- 26
Peer -Reviewed, Refereed Journal

# ಸೋಮನಾಥಪುರ ಸಂಶೋಧನೆ : ಜಾನಪದ ನೆಲೆ

ರಂಗನಾಥ ಟಿ.ಎನ್.[1]

ಜಾನಪದ ಸಂಶೋಧನೆ ಇಂದು ತನ್ನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಾ ಸಾಗಿದೆ. ಆರಂಭದಲ್ಲಿ ಅನ್ಯ ಶಿಸ್ತಿನೊಳಗೆ ಅಂತರ್ಗತವಾಗಿದ್ದ ಜಾನಪದ ಇಂದು ಬೇರೆ ಶಿಸ್ತುಗಳಲ್ಲಿ ಅಡಕವಾಗಿರುವ ಜಾನಪದ ಅಂಶಗಳನ್ನು ಗುರುತಿಸಿ ವಿಮರ್ಶಿಸುವಂತಹ ಶೋಧನೆಗಳು ಜರಗುತ್ತಿವೆ. ಇದರೊಟ್ಟಿಗೆ ಬಹುಶಿಸ್ತಿನ ನೆಲೆಯ ಅಧ್ಯಯನಗಳು ಜರುಗುತ್ತಿರುವುದು ಸಂತಸದ ಸಂಗತಿ. ಇದೇ ಹಾದಿಯಲ್ಲಿ ಕನ್ನಡ ನಾಡನ್ನು ಆಳಿರುವ ಹೊಯ್ಸಳ ದೊರೆಗಳ ಕಾಲದಲ್ಲಿ, ಅವರ ಕೃಪೆಯಿಂದ ನಿರ್ಮಾಣಗೊಂಡ ಸೋಮನಾಥಪುರ ದೇವಾಲಯವನ್ನು ಮತ್ತದರ ಶಿಲ್ಪಗಳನ್ನು ಜಾನಪದ ನೆಲೆಯಲ್ಲಿ ಬರೆಹದ ಮೂಲಕ ಅವಲೋಕಿಸುವ ಪ್ರಯತ್ನವಾಗಿದೆ.

ಮಾನವನ ಜೀವನದಲ್ಲಿ ಪ್ರವಾಸವು ಪ್ರಮುಖವಾಗಿ ಮನರಂಜನೆ ಮತ್ತು ಧಾರ್ಮಿಕ ಕಾರಣಗಳಿಂದ ಜರುಗುತ್ತವೆ. ಕೆಲವೊಮ್ಮೆ ಇವುಗಳನ್ನು ಮೀರಿ ಭಿನ್ನ ಕಾರಣಗಳಿಂದ ಪ್ರವಾಸ ಕೈಗೊಳ್ಳಬಹುದು. ಹೀಗೆಯೆ ಸಂಶೋಧನ ದೃಷ್ಟಿಯಿಂದ ಕಾಯ ಮತ್ತು ಮನಸ್ಸಿನ ಏಕಾಗ್ರ ಚಿತ್ತದಿಂದ ನೂತನತೆಯನ್ನು ಆಸ್ವಾದಿಸುವ ಸಲುವಾಗಿ ಖ್ಯಾತ ದೇವಾಲಯ ಹಾಗೂ ವಿಶ್ವವಿಖ್ಯಾತಿ ಪ್ರವಾಸಿ ತಾಣ ಸೋಮನಾಥಪುರಕ್ಕೆ ಭೇಟಿ ಕೈಗೊಳ್ಳಲಾಯಿತು. ಪೂರ್ವ ಸಿದ್ಧತೆಗಳ ಬಗೆಗೆ ನಿರ್ದಿಷ್ಟ ಆಲೋಚನೆ ಇಲ್ಲದ ಕಾರಣ ದಣಿವಾದರೆ ನೀಗಿಸಲು ನೀರು ಮತ್ತು ಮಾಹಿತಿ ಸಂಗ್ರಹಣೆಗೆ ಪೆನ್ನು ಪೇಪರ್‌ನೊಂದಿಗೆ, ಪ್ರಸ್ತುತ ಬದುಕಿನ ಒಡನಾಡಿ ಜಂಗಮವಾಣಿಯನ್ನು ಕಿಸೆಯಲ್ಲಿರಿಸಿ, ದಿನವೊಂದರ ಗಂಟೆ ಹತ್ತರಲ್ಲಿ ಬಿಸಿಲಿನ ಜಳಪಿನೊಂದಿಗೆ ಪ್ರಯಾಣ ಆರಂಭವಾಯಿತು.

ಸಾಮಾನ್ಯವಾಗಿ ನಾಗರೀಕತೆಗಳೆಲ್ಲ ನದಿಯ ತಟದಲ್ಲೆ ನೆಲೆನಿಂತವು ಎಂಬುದು ಈಗಾಗಲೇ ತಿಳಿದ ವಿಷಯ. ಹಾಗೇ ಸೋಮನಾಥಪುರವು ಸಹ ಕಾವೇರಿ ನದಿಯ ತಟದಲ್ಲಿಯೇ ನಿರ್ಮಾಣಗೊಂಡಿದೆ. ಎಂದಿನಂತೆ ಪ್ರವಾಸಕ್ಕೂ ಮುನ್ನ ಆ ಸ್ಥಳದ ಬಗ್ಗೆ ಪ್ರಾದೇಶಿಕವಾಗಿ, ಐತಿಹಾಸಿಕವಾಗಿ ಒಂದಷ್ಟು

[1].ಜಾನಪದ ಸಂಶೋಧನ ವಿದ್ಯಾರ್ಥಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ಮಾಹಿತಿಯನ್ನು ಮೊದಲೇ ತಿಳಿದುಕೊಳ್ಳಲಾಗಿತ್ತು. ಮೈಸೂರಿನಿಂದ ಸುಮಾರು ೩೦ ಕಿ.ಮಿ. ದೂರದಲ್ಲಿ ಸೋಮನಾಥಪುರವಿದೆ. ಮೈಸೂರಿನಿಂದ ಬನ್ನೂರಿನವರೆಗೂ ಒಣಹವೆ ಕಾರಣ ಬೇಸಿಗೆ, ನನ್ನನ್ನು ಅಲ್ಪ ವಿಚಲಿತಗೊಳಿಸಿದರು ಮುಂದೆ ನೀರಿನ ಒಡನಾಟದಿಂದ ಭೂಮಿ ತಂಪಾಗಿ, ಹಸಿರ ರಾಶಿ ಹೊದ್ದಿದ್ದ ಭೂದೇವಿ ಸುಮಧುರ ವಾತವರಣ, ಸಮಾಧಾನ ತಂದಿತು. ಹೀಗೆ ಪ್ರಯಾಣ ಮುಂದುವರೆಯಲೂ ಅಷ್ಟರಲ್ಲೆ ದೇವಾಲಯ ಎದುರುಗೊಂಡಿತು.

**ದೇವಾಲಯದ ಪಕ್ಷಿನೋಟ:**

ಬನ್ನೂರು ಮತ್ತು ಟಿ ನರಸೀಪುರ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಗ್ರಾಮವಿದೆ.ಇದೇ ರಸ್ತೆಯಿಂದ ನೂರು ಮೀಟರ್ ಅಂತರದಲ್ಲೆ ವಿಶಾಲವಾದ ಉದ್ಯಾನವನದ ನಡುವೆ ದೇವಾಲಯವಿದೆ.ಮೊದಲು ಸರ್ಕಾರದ ಸುಪರ್ದಿಯಲ್ಲಿದ್ದ ದೇವಾಲಯ ಇಂದು ಖಾಸಗಿಯವರಿಂದ ರಕ್ಷಣೆಗೊಳ್ಳಲ್ಪಡುತ್ತಿದೆ.ಶುಲ್ಕ ಪಾವತಿಸಿ ಪ್ರವೇಶ ಪಡೆದ ನಮ್ಮನ್ನ ಹಸಿರ ಹುಲ್ಲುಹಾಸು ಸ್ವಾಗತಿಸುತ್ತದೆ.ನೂರು ಮೀಟರ್ ನಡೆದರೆ ದೇವಾಲಯದ ಪ್ರವೇಶದ್ವಾರ ಎದುರುಗೊಳ್ಳುತ್ತದೆ. ಬೃಹತ್ ಕಲ್ಲುಗಳ ಕೋಟೆಯಿಂದ ದೇವಾಲಯ ಸುತ್ತುವರೆದಿದೆ. ದ್ವಾರ ಮಂಟಪದ ಮುಖೇನ ದೇವಾಲಯ ಪ್ರವೇಶಿಸುವ ನಮ್ಮ ಎಡಭಾಗದಲ್ಲಿ ಸುಂದರವಾದ, ಕಪ್ಪು ವರ್ಣದ ಶಿಲಾ ಶಾಸನ ಕಾಣಸಿಗುತ್ತದೆ. ಅದರ ಲಿಪಿ ಹಳಗನ್ನಡವನ್ನು ಭಾಷಾಂತರಿಸಿ ಪಕ್ಕದಲ್ಲೆ ಒಂದು ಫಲಕದಲ್ಲಿ ವಿವರವನ್ನು ನೀಡಲಾಗಿದೆ.

ಈ ಶಾಸನ ಪಠ್ಯದಲ್ಲಿ ನಮೂದಿಸಿರುವ ಪ್ರಮುಖ ಹೆಸರುಗಳೆಂದರೆ ಮೂರನೇ ನರಸಿಂಹ.ಇವರು ಹೊಯ್ಸಳರ ಹದಿನಾಲ್ಕನೆ ರಾಜ (ಕ್ರಿ.ಶ.೧೨೫೪–೧೨೯೧).ಇವರ ಕಾಲಾವಧಿಯಲ್ಲೇ ೧೨೬೮ರ ಸಮಯದಲ್ಲಿ ಕೇಶವ ದೇವಾಲಯ ನಿರ್ಮಾಣಗೊಂಡಿದೆ.ಮತ್ತೊಂದು ಹೆಸರು ಸೋಮಯ (ಸೋಮೇಶ್ವರ) ಇವನು ಮೂರನೇ ನರಸಿಂಹನ ದಂಡನಾಯಕನಾಗಿದ್ದನು.ಇವನೇ ತನ್ನ ಆಡಳಿದಲ್ಲಿದ್ದ.ಈ ಪ್ರದೇಶವನ್ನು ತನ್ನ ಹೆಸರಿನಿಂದಲೇ ಸೋಮನಾಥಪುರ ಎಂದು ನಿರ್ಮಿಸಿ, ಕೇಶವ ದೇವಾಲಯವನ್ನು ಕಟ್ಟಿಸಿದನೆಂದು ತಿಳಿಯಬಹುದು.ಅನೇಕ ರಾಜರ ಆಳ್ವಿಕೆಯನ್ನು ಕಂಡಿರುವ ಈ ಪ್ರದೇಶವು ಆರಂಭದಲ್ಲಿ ಗಂಗರ ಕಾಲದಲ್ಲಿ ಗಂಗವಾಡಿ ೯೬೦೦೦ ಎಂದು ಹೆಸರಾಗಿತ್ತು.ನಂತರ ಕೆಲಕಾಲ ಚೋಳರು ಇದನ್ನು ಆಕ್ರಮಿಸಿ ಕೊಂಡಿದ್ದರು.ತರುವಾಯ ಹೊಯ್ಸಳರು ಚೋಳರನ್ನು ಸೋಲಿಸಿ ಈ ಪ್ರಾಂತ್ಯಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಮುಂದೆ ದಂಡನಾಯಕ ಸೋಮನಾಥ ಈ ಪ್ರದೇಶದಲ್ಲಿ ಒಂದು ಸುಂದರ ಮತ್ತು ಸುಸಜ್ಜಿತ ನಗರವನ್ನು ನಿರ್ಮಾಣ ಮಾಡಿದನು. ಅದನ್ನು ಅಗ್ರಹಾರ ಎಂದು ಕರೆಯಲ್ಪಡುತ್ತಿತ್ತು.ನಗರವನ್ನು ಕೋಟೆಯಂತೆ ಸುತ್ತಲೂ ಗೋಡೆ ನಿರ್ಮಿಸಿ ರಕ್ಷಿಸಿದ್ದನು.ಅದರ ಕುರುಹುಗಳು ಇಂದಿಗೂ ಕಾಣಸಿಗುತ್ತದೆ.ದೇವರ ಆರಾಧನೆಯೊಂದಿಗೆ ಇಲ್ಲಿ ವಿದ್ಯಾಭ್ಯಾಸವೂ

ನಡೆಯುತ್ತಿದ್ದರ ಬಗೆಗೆ ಶಾಸನಾಧಾರಗಳಿವೆ. ಹಾಗಾಗೆ ಈ ನಗರವನ್ನು "ಸರ್ವನಮಸ್ಯ ಮಹಾಗ್ರಹಾರ ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ" ಎಂದು ಕರೆಯುತ್ತಿದ್ದರು.

ಸೋಮನಾಥನ ಸೋದರಳಿಯ ಮಲ್ಲಿದೇವ ಮತ್ತು ಚಿಕ್ಕಕೇತ ಎಂಬ ದಂಡನಾಯಕರು, ಇವರಿಗೆ ದೇವಾಲಯದ ಜವಾಬ್ದಾರಿಯನ್ನು ಸೋಮನಾಥ ನೀಡಿದ್ದನೆಂಬುದು ಶಾಸನದಿಂದ ತಿಳಿದು ಬರುತ್ತದೆ.ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಸೋಮನಾಥಪುರದ ಪಕ್ಕದಲ್ಲೆ ಕೇತುಪುರ ಎಂಬ ಗ್ರಾಮವಿದೆ. ಸ್ಥಳನಾಮ ಸಂಶೋಧನೆಯ ಪ್ರಕಾರ ಶಾಸನದಲ್ಲಿ ಉಲ್ಲೇಖಿತ ಚಿಕ್ಕಕೇತುವಿನ ಹೆಸರು ಈ ಕೇತುಪುರಕ್ಕೆ ಬಂದಿರಬಹುದಾದ ಸಾಧ್ಯತೆಗಳಿವೆ. ಅಥವಾ ಚಿಕ್ಕಕೇತ ಈ ಸ್ಥಳದವನಾಗಿದ್ದಾನೆ. ಹಾಗೆ ಮಲ್ಲಿದೇವನ ಹೆಸರಿನ ಗ್ರಾಮವು ಇದ್ದಿದ್ದು ಕಾಲಾನಂತರದಲ್ಲಿ ಗ್ರಾಮದ ಹೆಸರು ಬದಲಾಗಿರುವ ಸಾಧ್ಯತೆಗಳಿವೆ. ಮುಂದುವರೆದು ಹೊಯ್ಸಳರ ಮೂರನೆ ಬಲ್ಲಾಳನ ಹೆಸರು ಮತ್ತು ದೇವಾಲಯಕ್ಕೆ ನೀಡಿದ ದಾನ ಧರ್ಮಗಳ ವಿವರಗಳನ್ನು ಈ ಶಾಸನದಿಂದ ತಿಳಿಯಬಹುದಾಗಿದೆ.

**ದೇವಾಲಯದ ಪ್ರಾಂಗಣ:**

ಹದಿಮೂರನೇ ಶತಮಾನದಲ್ಲಿ ನಿರ್ಮಾಣಗೊಂಡ ಕೇಶವ ದೇವಾಲಯ ತನ್ನ ಅಮೋಘ ಕೆತ್ತನೆಯಿಂದ ಸುಂದರವಾಗಿದೆ. ಕುಸರಿ ಕಲೆಯಂತೆ ಕಲ್ಲನ್ನು ತನ್ನಿಷ್ಟದ ಆಕಾರಕ್ಕೆ ಕೆತ್ತಿರುವ ಶಿಲ್ಪಗಳ ನೈಪುಣ್ಯತೆ ಅವರ ಶ್ರಮ ಮತ್ತು ಆಸಕ್ತಿಗೆ ಹಿಡಿದ ಕೈಗನ್ನಡಿಯಾಗಿವೆ. ನಕ್ಷತ್ರಾಕಾರದ ಜಗುಲಿಯ ಮೇಲೆ ದೇವಾಲಯ ನಿರ್ಮಾಣಗೊಂಡಿದೆ.ಆ ಜಗುಲಿಗೆ ನಕ್ಷತ್ರಾಕಾರದ ಕೋನಗಳಲ್ಲಿ ಆನೆಗಳ ವಿಗ್ರಹಗಳನ್ನು ಕೆತ್ತಲಾಗಿದೆ.ಆ ಮೂರ್ತಿಗಳು ಪರಕೀಯರ ದಾಳಿಯಿಂದ ಶಿಥಿಲಗೊಂಡಿದ್ದರು ಸಂಶೋಧಕನ ಕಲ್ಪನೆಯಲ್ಲಿ ಅದು ಭವ್ಯತೆಯಿಂದಲೇ ಕಾಣಿಸುತ್ತದೆ. ದೇವಾಲಯದ ಸುತ್ತಲೂ ೬೪ ಗರ್ಭಗುಡಿಗಳಿವೆ ಅದರಲ್ಲಿ ದ್ವಾರಗೋಪುರಕ್ಕೆ ಹೊಂದಿಕೊಂಡ ೬ ಕೋಣೆಗಳು ವಿಶೇಷವಾಗಿದ್ದು ಉಳಿದ ೫೮ ಗುಡಿಗಳು ಖಾಲಿ ಇವೆ. ಅವುಗಳಲ್ಲಿ ವಿವಿಧ ದೇವರ ವಿಗ್ರಹಗಳ ಸ್ಥಾಪಿಸಿದ್ದರು ನಂತರ ಪರಕೀಯರ ದಾಳಿಯಿಂದ ನಶಿಸಿ ಹೋಗಿರಬೇಕು. ಉಳಿದ ೪ ರಿಂದ ಐದು ವಿಗ್ರಹಗಳು ಎಡಪಾರ್ಶ್ವದ ಎರಡು ಕೋಣೆಗಳಲ್ಲಿ ಸಂರಕ್ಷಿಸಿಡಲಾಗಿದೆ.ಅವುಗಳಲ್ಲಿ ಒಂದು ಕೇತುವಿನ ವಿಗ್ರಹವಿದೆ.ಇದು ಸಂಶೋಧಕನನ್ನು ಚಕಿತಗೊಳಿಸುವ ಸಂಗತಿಯಾಗಿವೆ. ಏಕೆಂದರೆ ಚಿಕ್ಕಕೇತು, ಕೇತುಪುರ ಮತ್ತು ಈ ಕೇತುವಿನ ವಿಗ್ರಹಗಳ ಸಂಬಂಧವನ್ನು ಕಲ್ಪಿಸುವ ಕಥೆ ಮಸ್ತಕದಲ್ಲಿ ಒಡಮೂಡುತ್ತದೆ.ಈ ೬೪ ಕೋಣೆಗಳ ಕಲ್ಲುಗಳು ಹೊಯ್ಸಳರ ಕಾಲದ್ದಾಗಿರದೆ ಕಾಡುಗಲ್ಲುಗಳಿಂದ ನಿರ್ಮಿತವಾಗಿರುವುದರಿಂದ ಬಹುಶಃ ಹೊಯ್ಸಳರ ನಂತರ ವಿಜಯನಗರ ಕಾಲದ ಆಡಳಿತಾವಧಿಯಲ್ಲಿ ಜೀರ್ಣೋದ್ಧಾರ ಗೊಂಡಿರಬಹುದು.ಮಂಟಪಗಳನ್ನು ಗಮನಿಸಿದರೆ ಶಿಥಿಲಗೊಂಡ ಕಟ್ಟಡವನ್ನು ಮರು ಜೋಡಣೆ ಮಾಡಿರುವುದು ಅಸ್ತವ್ಯಸ್ಥಗೊಂಡ ಶಿಲೆಗಳಿಂದ ಗೋಚರಿಸುತ್ತದೆ.

**ಶಿಲ್ಪಗಳೇಳುವ ಕಥೆ:**

ಹೊಯ್ಸಳರು ತಮ್ಮ ಆಡಳಿತಾವಧಿಯಲ್ಲಿ ನಿರ್ಮಿಸಿದ ದೇವಾಲಯಗಳೆಲ್ಲವೂ ಹೆಚ್ಚು ಕಡಿಮೆ ತನ್ನ ಸೌಂದರ್ಯದಿಂದ ಜಗದ್ವಿಖ್ಯಾತಿ ಗಳಿಸಿಕೊಂಡಿವೆ. ಜಗತ್ತಿನೆಲ್ಲೆಡೆಯ ಪ್ರವಾಸಿಗರನ್ನು ತನ್ನತ್ತ ಕೈ ಬೀಸಿ ಕರೆಯುತ್ತಿದೆ. ಒಂದರ್ಥದಲ್ಲಿ ಮೋಡಿ ಮಾಡಿದೆ.ಕಾರಣ ಅವರ ಕೆತ್ತನೆಯ ಶೈಲಿ.ಕಲ್ಲನ್ನು ಬಹು ಸೂಕ್ಷ್ಮವಾಗಿ ಕೆತ್ತುವ ಅವರ ಚಾಕಚಕ್ಯತೆ ಈ ನಾಡಿನಲ್ಲಿ ಆ ಕಲೆ ಮತ್ಯಾರಿಗೂ ಒಲಿಯಲಿಲ್ಲ ಎಂಬುದು ಗಮನಾರ್ಹ ಸಂಗತಿ.ಅದಕ್ಕೆ ಪ್ರಮುಖ ಕಾರಣ ಅವರು ಆಯ್ಕೆ ಮಾಡಿಕೊಂಡ ಶಿಲೆಯು ಸಹ ಹೌದು.ಕಪ್ಪುವರ್ಣದ ಬಳಪದ ಕಲ್ಲು, ಬೆಣ್ಣೆಯನ್ನು ಕಡೆದ ಹಾಗೆ ಬೇಕಾದ ಆಕಾರಕ್ಕೆ ತರುಬಹುದಾದ ನಾಜೂಕುತನವನ್ನು ಹೊಂದಿದೆ.

ದೇವಾಲಯದ ಹೊರಾಂಗಣದ ಇಂಚಿಂಚು ಕೂಡ ಶಿಲ್ಪಗಳು ಮತ್ತು ಚಿಕಣಿ ಕಲೆಗಳಿಂದ ಅಲಂಕರಿಸಲಾಗಿದೆ.ನಕ್ಷತ್ರಕಾರದ ಜಗಲಿಯನ್ನು ಹಲವು ಶಿಲ್ಪಗಳ ಕೆತ್ತನೆಗಳಿಂದ ಅಲಂಕರಿಸಿದ್ದರೆ.ಅದರ ಮೇಲೆ ದೇವಾಲಯದ ಮಂಟಪವನ್ನು ವೇಸರ ಶೈಲಿಯಲ್ಲಿ ನಿರ್ಮಿಸಲಾಗಿದೆ.ಅರ್ಧಮಂಟಪ, ಶುಕನಾಸಿ, ನವರಂಗ, ಗರ್ಭಗುಡಿಗೆ ಹೊಂದಿಕೊಂಡ ಗೋಡೆಗಳ ಮೇಲೆಲ್ಲಾ ಸಾವಿರಾರು ಸಣ್ಣ ಸಣ್ಣ ವಿಗ್ರಹಗಳನ್ನು ಕೆತ್ತಲಾಗಿದೆ.ಅವುಗಳ ಮೂಲಕ ಹಿಂದೂ ಧರ್ಮದ ಪವಿತ್ರ ಕಥೆಗಳಾದ ರಾಮಾಯಣ, ಮಹಾಭಾರತ ಮತ್ತು ಭಾಗವತದ ಕಥೆಗಳನ್ನು ವಿವರಿಸಿದ್ದಾರೆ.ಇವುಗಳಲ್ಲದೆ ಯುದ್ಧದ ಸನ್ನಿವೇಶ. ಆನೆ, ಕುದುರೆ, ಒಂಟೆಗಳ ಜೊತೆ ಜೊತೆಗೆ ಸಾಮಾಜಿಕ ಜೀವನದ ಹಲವು ಸನ್ನಿವೇಷಗಳನ್ನು ಚಿತ್ರಿಸಿದ್ದಾರೆ.

ದೇವಾಲಯಗಳು ಶಿಷ್ಟತೆಯ ಪರಿಕಲ್ಪನೆಯೇ ಆದರೂ ದೇವಾಲಯದ ಈ ಕೆತ್ತನೆಯ ಉದ್ದೇಶ ಸಾಮಾನ್ಯರಿಗೂ ಮಹಾಕಾವ್ಯಗಳನ್ನು ಪರಿಚಯಿಸುವ ಸದುದ್ದೇಶವೇ ಆಗಿದೆ.ಜನಪದರಿಗೆ ಗರ್ಭಗುಡಿಯ ಪ್ರವೇಶ ನಿಷಿದ್ಧವಾಗಿದ್ದರೂ ಸಹ, ಪ್ರಾಂಗಣಕ್ಕೆ ಅವಕಾಶವಿದ್ದಂತೆ ಭಾಸವಾಗುತ್ತದೆ. ಹಾಗಾಗಿ ಜನ ಸಾಮಾನ್ಯರಿಗೆ ಮಹಾಕಾವ್ಯವನ್ನು ತಿಳಿಸುವ ಸಲುವಾಗಿ ಕಥೆಗಳನ್ನು ಕೆತ್ತನೆಗಳ ಮುಖೇನ ಹರಡಿರುವ ಸಾಧ್ಯತೆಗಳಿವೆ.

ಅರ್ಧ ಮಂಟಪದ ಎಡ ಮತ್ತು ಬಲ ಭಾಗದ ಪಾರ್ಶ್ವದ ಗೋಡೆಗಳ ಮೇಲೆ ಏಳು ಹಂತಗಳಲ್ಲಿ ಉಬ್ಬು ಶಿಲ್ಪಗಳು ಮತ್ತು ವಿಗ್ರಹಗಳನ್ನು ಕೆತ್ತಲಾಗಿದೆ.ಎಡ ಭಾಗದಿಂದ ಆರಂಭಿಸಿದರೆ ನಾರಾಯಣ ದೇವಾಲಯದ ಮುಂದೆ ಇರುವಂತೆ ಜಯ ವಿಜಯರ ವಿಗ್ರಹಗಳಿವೆ. ಇನ್ನು ಏಳು ಪಟ್ಟಿಕೆಗಳಲ್ಲಿ ಹಂತ ಹಂತವಾಗಿ ಭಿನ್ನ ವಿಭಿನ್ನ ವಿಗ್ರಹಗಳನ್ನು ಕೆತ್ತಲಾಗಿದೆ.ಕೆಳ ಭಾಗದ ಪಟ್ಟಿಕೆಯು ದೇವಾಲಯದ ಸುತ್ತಲು ಆನೆಗಳ ವಿಗ್ರಹಗಳನ್ನೆ ಹೊಂದಿದೆ.ಇದು ಆನೆಗಳ ಸಮೂಹವೆ ದೇವಾಲಯವನ್ನು ಎತ್ತಿ ಹಿಡಿದಂತೆ ಭಾಸವಾಗುತ್ತವೆ. ಈ ಪಟ್ಟಿಕೆಗಳನ್ನು ಕೆಳಹಂತದಿಂದ ವಿವರಿಸುವುದಾದರೆ.

**ಒಂದನೇ ಪಟ್ಟಿಕೆ:** ಸುಮಾರು ಮುಕ್ಕಾಲು ಅಡಿಗಳಷ್ಟು ಅಳತೆಯುಳ್ಳ ಈ ಪಟ್ಟಕೆಯಲ್ಲಿ ಆನೆಗಳ ವಿಗ್ರಹವಿದೆ. ಆ ಆನೆಗಳ ಮೇಲೆ ಆಯುಧವನ್ನು ಹಿಡಿದ ರಾಜ ಅಥವಾ ಸೈನಿಕನಿದ್ದಾನೆ, ಅವನ ಹಿಂದೆ ರಾಣಿ ಕುಳಿತಿರುವ ಸುಂದರ ಮೂರ್ತಿಗಳಿದ್ದವು, ದಾಳಿಯಿಂದಾಗಿ ಆ ಚಿಕ್ಕ ಶಿಲ್ಪಗಳೆಲ್ಲ ಮುರಿದು ಹೋಗಿವೆ. ಆನೆಗಳನ್ನು ಸುಂದರವಾಗಿ ಅಲಂಕರಿಸಲಾಗಿದೆ.ಅದರ ಕಾಲುಗಳಿಗೆ ಬಳೆಯನ್ನು ತೊಡಿಸಿ, ಕುತ್ತಿಗೆಗೆ ಸುಂದರವಾದ ಎದೆಹಾರವನ್ನು ಹಾಕಿರುವಂತೆ ಚಿತ್ರಿಸಲಾಗಿದೆ. ಹಾಗೇ ಆನೆಯ ಬೆನ್ನ ಮೇಲೆ ವಸ್ತ್ರವನ್ನು ಹಾಕಿರುವಂತೆ ಚಿತ್ರಿಸಿ ಮತ್ತು ಇನ್ನಷ್ಟು ಆಭರಣಗಳಿಂದ ಅಲಂಕರಿಸಿರುವುದನ್ನು ಕಾಣಬಹುದಾಗಿದೆ. ಈ ವಿಗ್ರಹಗಳಿಂದ ಅಂದಿನ ಕಾಲದ ಯುದ್ಧದ ಸನ್ನಿವೇಶಗಳ ವಾಸ್ತವತೆಯನ್ನು ತಿಳಿಯಬಹುದು.ಆನೆಗಳು ಯುದ್ಧ ಮತ್ತು ಸಾಮ್ರಾಜ್ಯದ ಭಾಗವಾಗಿ ಹಾಗೂ ಸಾಮಾಜಿಕ ಸ್ಥಿತಿಯನ್ನು ಗಮನಿಸಬಹುದಾಗಿದೆ.ಅದನ್ನು ನಿರ್ವಹಿಸುತ್ತಿದ್ದ ಮಾವುತರು ಅವರ ಕುಟುಂಬ, ಅಷ್ಟೂ ಆನೆಗಳ ನಿರ್ವಹಣೆ, ಆಹಾರ ಪದ್ದತಿ, ವನ್ಯ ಸಂಪತ್ತು, ದಿನಚರಿ ಹೀಗೆ ಹಲವು ಅಂಶಗಳು ಅಂದಿನ ಸಾಮಾಜಿಕ ಚಿತ್ರಣದ ಮೇಲೆ ಬೆಳಕುಚೆಲ್ಲುತ್ತವೆ. ಇದೇ ಸಾಲಿನಲ್ಲಿ ಅಲ್ಲಲ್ಲಿ ಆಯುಧಗಳನ್ನು ಹಿಡಿದ ಸೈನಿಕನ ಮೂರ್ತಿಗಳು ಕಾಣಸಿಗುತ್ತವೆ.

**ಎರಡನೇ ಪಟ್ಟಿಕೆ:** ಈ ಹಂತದಲ್ಲಿ ಕುದುರೆಗಳೆ ದೇವಾಲಯದ ಸುತ್ತಲೂ ಇವೆ. ಇದರೊಂದಿಗೆ ಅಲ್ಲಲ್ಲಿ ರಣಭೇರಿಯನ್ನು ಹೊತ್ತಿರುವ ಒಂಟೆಯ ಉಬ್ಬು ಶಿಲ್ಪಗಳೂ ಇವೆ. ಅಶ್ವಗಳನ್ನು ಸುಂದರವಾಗಿ ಅಲಂಕರಿಸಲಾಗಿದೆ, ಯುದ್ಧಕ್ಕೆ ಸನ್ನದ್ಧವಾದ ಅಶ್ವಗಳಂತೆ ಗೋಚರಿಸುತ್ತವೆ. ಎರಡು ಕಾಲುಗಳನ್ನು ಮೇಲಕ್ಕೆತ್ತಿ ಇನ್ನೆರೆಡು ಕಾಲುಗಳಲ್ಲಿ ನಿಂತಿರುವ ಕುದುರೆಯ ಬೆನ್ನ ಮೇಲೆ ಆಯುಧವನ್ನು ಹೆಗಲ ಮೇಲೆ ಹೊತ್ತ ಸೈನಿಕನು ಕುಳಿತಿರುವ ಭಂಗಿಯ ಶಿಲ್ಪಗಳೆ ಹೆಚ್ಚು. ಇದರ ನಡು ನಡುವೆ ಕತ್ತಿ ಮತ್ತು ಗುರಾಣಿಗಳನ್ನು ಹಿಡಿದ ಸೈನಿಕ ಪಡೆ ಇದೆ. ಹಾಗೇ ಕುದುರೆಗಳ ಕಾಲುಗಳ ಕೆಳಗೆ ಸೈನಿಕರು ಮತ್ತು ಕಪಿಗಳ ಶಿಲ್ಪಗಳನ್ನು ಸಹ ಕೆತ್ತಲಾಗಿದೆ. ನಡುವೆ ಒಂಟೆಗಳು ಅದರ ಮೇಲೆ ರಣವಾದ್ಯವನ್ನು ಬಾರಿಸುವ ಸೈನಿಕರೂ ಸಹ ಇದ್ದಾರೆ. ಈ ಹಂತದಲ್ಲಿ ಸಾಮ್ರಾಜ್ಯದ ಪ್ರಮುಖ ಅಂಗ ಅಶ್ವದಳ ಮತ್ತು ಕಾಲ್ದಳಗಳು, ಇಲ್ಲಿ ಅವರ ಆಯುಧಗಳು ಹಾಗೂ ಅವರ ವಸ್ತ್ರ ವಿನ್ಯಾಸಗಳು, ವೇಷ ಭೂಷಣಗಳು, ಯುದ್ಧಕ್ಕೆ ಸನ್ನದ್ಧರಾದ ಹುಮ್ಮಸ್ಸು ತನ್ನ ಸಾಮ್ರಾಜ್ಯ ಮತ್ತು ರಾಜನಿಗಾಗಿ ಶ್ರಮಿಸುವ ಪರಿಯನ್ನು ಈ ಪಟ್ಟಕೆಯನ್ನು ಆಳವಾಗಿ ಗಮನಿಸುವುದರ ಮೂಲಕ ತಿಳಿಯ ಬಹುದಾಗಿದೆ. ಹಾಗೆ ಜನಪದ ವಾದ್ಯಗಳು ಯುದ್ಧದ ಸಮಯದಲ್ಲಿ ಸೈನಿಕರನ್ನು ಉನ್ಮಾದ ಗೊಳಿಸಲು ಬಾರಿಸುತ್ತಿದ್ದ ಅಂಶವು ಮತ್ತೊಂದು ವಿಧದ ಸಂಶೋಧನೆಗೆ ಪ್ರೇರಕವಾಗಿದೆ. ಇಲ್ಲಿ ಸೈನಿಕರೊಂದಿಗೆ ಅಶ್ವಗಳ ವಿನ್ಯಾಸ, ಉಡುಪು, ಜೀವನ, ನಿರ್ವಹಣೆ ಎಂಬ ಹಲವು ಸಂಗತಿಗಳು ಸಂಶೋಧನೆಗೆ ಆಕರವಾಗುವ ಸಾಧ್ಯತೆಗಳಿವೆ.

**ಮೂರನೇ ಪಟ್ಟಿಕೆ:** ಇದು ಅಲಂಕಾರಿಕ ಹಂತದ ಪಟ್ಟಿಕೆಯಂತಿದೆ ಬಳ್ಳಿಯಂತೆ ಸುತ್ತಿಕೊಂಡು ವೃತ್ತಾಕಾರದಲ್ಲಿ ಒಂದಕ್ಕೊಂದು ಬೆಸೆದುಕೊಂಡು ಸಾಗಿದೆ. ಬಳ್ಳಿಯ ಕೊನೆಯಲ್ಲಿ ಹೂವು, ಮೊಗ್ಗಿನ

ರೂಪದ ಚಿತ್ರಗಳನ್ನು ಚಿಕಣಿ ಶಿಲ್ಪಗಳಂತೆ ಕೆತ್ತಲಾಗಿದೆ.ಕೆಲವೊಂದೆಡೆ ಸಿಂಹ ವದನದ ಚಿತ್ರವನ್ನು ಕಾಣಬಹುದು.ಈ ಪಟ್ಟಿಕೆಯಿಂದ ಮಾನವ ಪ್ರಕೃತಿಯ ಬಗೆಗಿನ ಅನನ್ಯ ಸಂಬಂಧವನ್ನು ಹಾಗೂ ಶುಭ ಸೂಚನೆಗೆ ಹಸಿರಿನ ತೋರಣ ಹಾಕುವ ಜನಪದರ ಮನಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಬಹುದಾಗಿದೆ.

**ನಾಲ್ಕನೇ ಪಟ್ಟಿಕೆ:** ಪ್ರಮುಖವಾಗಿ ಸಾಮಾಜಿಕ ಮತ್ತು ಧಾರ್ಮಿಕ ಚಿತ್ರಣವನ್ನು ಈ ಪಟ್ಟಿಕೆಯಲ್ಲಿ ಚಿತ್ರಿಸಲಾಗಿದೆ. ನಕ್ಷತ್ರಾಕಾರದ ದೇವಾಲಯದ ಸುತ್ತಲೂ ಈ ಪಟ್ಟಿಕೆಯಲ್ಲಿ ಸಾವಿರಾರು ವಿಗ್ರಹಗಳನ್ನು ಕೆತ್ತಿದ್ದಾರೆ.ನೈಜ ಸಂಶೋಧನೆ ಕೈಗೊಳ್ಳುವ ಮನಸ್ಸಿಗೆ ಈ ಪಟ್ಟಿಕೆ ಬರಪೂರ ಮಾಹಿತಿಯ ಆಗರವಾಗಲಿದೆ.ಭಾರತದ ಮೂಲ ಕಾವ್ಯವಾದ ರಾಮಾಯಣದ ಕಥೆಯನ್ನು ಶಿಲ್ಪಗಳಲ್ಲಿ ಚಿತ್ರಿಸಿ ಬಹುಮುಖ್ಯ ಸನ್ನಿವೇಶಗಳನ್ನು ಉಬ್ಬು ಶಿಲ್ಪಗಳ ಮೂಲಕ ತಿಳಿಯ ಪಡಿಸಿದ್ದಾರೆ. ದಶರಥನಿಗೆ ಮಕ್ಕಳು ಜನಿಸಿದಾಗಿನಿಂದ ಹಿಡಿದು ರಾಮನ ಪಟ್ಟಾಭಿಷೇಕ ಅವರ ವಿದ್ಯಾಭ್ಯಾಸ, ಯುದ್ಧ, ಕಲೆ, ರಾಕ್ಷಸ ವಧೆ, ಹಾಗೆ ಬೆಳೆದು ದೊಡ್ಡವರಾದ ರಾಮ ಮತ್ತು ಲಕ್ಷ್ಮಣರ ಮದುವೆ, ವನವಾಸ, ರಾಮ ಸೀತೆಗಾಗಿ ಮಾಯಾಮೃಗ ಬೇಟೆಯಾಡುವುದು, ರಾವಣ ಸೀತೆಯನ್ನು ಅಪಹರಿಸುವುದು, ರಾಮ ವಾನರರನ್ನು ಬೇಟಿಯಾಗುವುದು ಈ ಎಲ್ಲಾ ಕಥೆಗಳನ್ನು ಉಬ್ಬು ಶಿಲ್ಪಗಳ ಮೂಲಕ ಚಿತ್ರಿಸಲಾಗಿದೆ. ಒಂದರ್ಥದಲ್ಲಿ ಕಥೆ ಇಲ್ಲಿಗೆ ಸ್ತಬ್ಧಗೊಂಡು ಅಪರಿಪೂರ್ಣಗೊಂಡಂತೆ ಭಾಸವಾಗುತ್ತದೆ. ಇಲ್ಲಿ ಭಾರತದ ಮಹಾಕಾವ್ಯ ರಾಮಾಯಣ ಚಿತ್ರಿತವಾಗಿರುವುದು ಒಂದೆಡೆಯಾದರೆ ಅಂದಿನ ಕಾಲದ ವೇಷಭೂಷಣಗಳು, ವಸ್ತ್ರ ಅಲಂಕಾರ, ಕೇಶವಿನ್ಯಾಸ, ಆಯುಧಗಳು, ಪ್ರಾಣಿ ಪಕ್ಷಿಗಳು, ಕೆಲವು ಸಾಮಾಜಿಕ ಸಂದರ್ಭಗಳು, ಹೀಗೆ ಇನ್ನು ಹತ್ತು ಹಲವು ಪೂರಕ ಅಂಶಗಳ ಮೇಲೆ ಶಿಲ್ಪಗಳು ಬೆಳಕುಚೆಲ್ಲಿ ಸಂಶೋಧಕನಿಗೆ ದೃಶ್ಯಕಾವ್ಯದಂತೆ ರಸದೌತಣವೀಯುತ್ತವೆ. ಮುಂದುವರೆದು ಭಾಗವತದ ಕಥೆಯ ಶಿಲ್ಪಗಳು ಮೂಡಿಬಂದಿವೆ. ಅಮೃತ ಮಂಥನ ವಾಸುದೇವನ ವಿವಾಹ, ಬಾಲಕೃಷ್ಣ, ಅವನಿಗೆ ಎದುರುಗೊಂಡ  ಅನಾಹುತಗಳು, ಅವನ ಆಟೋಟಗಳೊಂದಿಗೆ ಪೂತನಿಯ ಸಂಹಾರ, ಸಂಗಡಿಗರೊಂದಿಗಿನ ಕ್ರೀಡೆ, ಗೋಪಿಕೆಯರೊಂದಿಗಿನ ಚೆಲ್ಲಾಟ, ಕೃಷ್ಣ ಗೋವರ್ಧನ ಗಿರಿ ಎತ್ತುವುದು ಮುಂದೆ ರಾಕ್ಷಸರೊಡನೆ ಹೋರಾಟ ಹೀಗೆ ಭಾಗವತ ಪುರಾಣ ಕಾಲಘಟ್ಟದ ಹಲವು ಸಂದರ್ಭಗಳು ಶಿಲ್ಪಗಳಲ್ಲಿ ಮೂಡಿವೆ. ಇಲ್ಲಿ ಕೃಷ್ಣನ ಜನ್ಮದ ಹಿಂದಿನಿಂದ ಅವನು ಹುಟ್ಟು ಬೆಳೆದು ಆಟವಾಡುತ್ತ ನಡೆದು ಹಲವು ವಿಶಿಷ್ಟ ಸನ್ನಿವೇಶಗಳು ಶಿಲ್ಪಗಳಲ್ಲಿ ಚಿತ್ರಿತವಾಗಿದೆ. ಇದರೊಟ್ಟಿಗೆ  ಅಂದಿನ ಸಾಮಾಜಿಕ ಜೀವನವೆ ಶಿಲ್ಪಗಳಲ್ಲಿ ತೆರೆದುಕೊಂಡಿವೆ. ಮಗುವೊಂದು ಹುಟ್ಟಿ ಬೆಳೆದು ಆಟವಾಡುತ್ತಾ ಪ್ರೌಢಾವಸ್ಥೆ ತಲುಪಿದಾಗ ನಡೆವ ಹಲವು ಘಟನೆಗಳು, ಇವು ಸಾಮಾಜಿಕ ಚಿತ್ರಣವಾದರು ಇಲ್ಲಿನ ಹಲವು ಅಂಶಗಳು ಜಾನಪದಕ್ಕೆ ಪೂರಕವಾಗಿವೆ.

ಮುಂದುವರೆದು ಮತ್ತೊಂದು ಮಹಾಕಾವ್ಯ ಮಹಾಭಾರತವನ್ನು ಶಿಲ್ಪಗಳ ಮೂಲಕ ಹೇಳಿರುವ ಹೊಯ್ಸಳರು ಬಹು ವಿಭಿನ್ನತೆಗೆ ಸಾಕ್ಷಿಯಾದವರು.ಮೊದಲೇ ತಿಳಿದಂತೆ ಮಹಾಭಾರತವು ಜೀವನದ ಸಾರ ಸರ್ವಸ್ವವನ್ನು ಹೊಂದಿರುವ ಕಥೆ, ಇದನ್ನು ಲೌಕಿಕ ನೆಲೆಯಲ್ಲಿ ನಿಂತು ನೋಡಿದಾಗ ಸಿಗುವ ಜೀವನಾನುಭವವೇ ವಿಸ್ಮಯ ಅನುಭವ ನೀಡುತ್ತದೆ.ಆರಂಭದಲ್ಲಿ ಆಸ್ಥಾನ ಚಿತ್ರಣವನ್ನು ಸೃಜಿಸಿ ಅಲ್ಲಿಂದ ಕಥೆಯನ್ನು ಎಳೆಎಳೆಯಾಗಿ ಮುಂದುವರೆಸಿಕೊಂಡು ಸಾಗಿದ್ದಾರೆ. ಪಾಂಡವ ಕೌರವರ ಬಾಲ್ಯ ಪ್ರೌಢಾವಸ್ಥೆ ವಿಧ್ಯಾಭ್ಯಾಸಗಳನ್ನು ಹೇಳಿ ಮುಂದೆ ವನವಾಸಕ್ಕೆ ತೆರಳಿದ ಪಾಂಡವರು ಎದುರಿಸುವ ಹಲವು ಘಟನೆಗಳನ್ನು ಶಿಲ್ಪಗಳು ಸಂಶೋಧಕನಿಗೆ ಹೇಳುತ್ತ ಸಾಗುತ್ತವೆ. ಕೆಲವು ವಿಶಿಷ್ಟ ಸಂದರ್ಭಗಳಂತು ಕಾಲ್ಪನಿಕ ಲೋಕಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತವೆ. ಇಲ್ಲಿ ಕಥಾನಾಯಕರು ಮತ್ತು ಅವರ ಬದುಕಿನ ಹಲವು ಸನ್ನಿವೇಶಗಳು ಜಾನಪದ ನೆಲೆಯೊಂದಿಗೆ ತಾಳೆಹಾಕಿಕೊಂಡಿರುವುದನ್ನು ಸೂಕ್ಷ್ಮವಾಗಿ ಗುರುತಿಸಬಹುದಾಗಿದೆ. ಒಟ್ಟಾರೆ ಈ ಮಹಾಕಾವ್ಯಗಳು ಮಾನವ ಬದುಕಿನ ಭಾಗಗಳೇ ಆಗಿವೆ. ದೈವತ್ವದ ಸ್ಪರ್ಷ ದೊರೆತು ಮಹತ್ವವನ್ನು ಗಳಿಸಿಕೊಂಡಿವೆ.

**ಐದು ಮತ್ತು ಆರನೇ ಪಟ್ಟಿಕೆ:** ಮುಂದಿನ ಹಂತದಲ್ಲಿ ಎರಡು ಅಡಿಗಳಷ್ಟು ಎತ್ತರದ ನೂರಾರು ದೇವರ ವಿಗ್ರಹಗಳನ್ನು ಕೆತ್ತಲಾಗಿದೆ. ಇವುಗಳ ತಳ ಭಾಗದಲ್ಲಿ ವಿಗ್ರಹಗಳನ್ನು ಕೆತ್ತಿದ ಶಿಲ್ಪಿಗಳು ತಮ್ಮ ಹೆಸರುಗಳನ್ನು ನಮೂದಿಸಿದ್ದಾರೆ.ಮುಂದಿನ ಹಂತದಲ್ಲಿ ಗೋಪುರದ ವಿನ್ಯಾಸವನ್ನು ಕೆತ್ತಲಾಗಿದೆ.ಇದು ದೇವಾಲಯದ ಸುತ್ತಲೂ ಇರುವುದನ್ನು ಕಾಣಬಹುದಾಗಿದೆ. ಪ್ರಮುಖವಾಗಿ ನವಿಲು, ಯಾಳಿ, ಸಿಂಹ, ಕುದುರೆ, ಆನೆ, ಕೋತಿ, ಜಿಂಕೆ, ಹುಲಿ ಇನ್ನು ಹೀಗೆ ಹಲವು ಪ್ರಾಣಿಗಳು ಶಿಲ್ಪಗಳಲ್ಲಿ ಗೋಚರಿಸುತ್ತವೆ. ಇವುಗಳ ಮೇಲೆಯೆ ಒಂದು ಸಂಶೋಧನೆ ಕೈಗೊಂಡರೂ ಅಚ್ಚರಿ ಪಡಬೇಕಾಗಿಲ್ಲ ಆ ಕಾಲದ ಪ್ರಾಣಿ ಸಂಕುಲವೆ ಜಗತ್ತಿನ ಮುಂದೆ ತೆರೆದುಕೊಳ್ಳುತ್ತದೆ.ಇವುಗಳೊಟ್ಟಿಗೆ ಹಿಂದೂ ಧರ್ಮದ ನೀತಿಕಥೆಗಳು ಮತ್ತು ಹಲವು ದಂತ ಕಥೆಗಳನ್ನು ಸಹ ಚಿತ್ರಿಸಿದ್ದಾರೆ.ಇವುಗಳೊಂದಿಗೆ ಭಿನ್ನ ವಿಭಿನ್ನ ದೇವರ ವಿಗ್ರಹಗಳು ಸಂಶೋಧಕನನ್ನು ಚಕಿತಗೊಳಿಸುತ್ತವೆ. ಅವುಗಳ ಸ್ವರೂಪ, ಆಕಾರ, ವಿನ್ಯಾಸಗಳಿಂದ ಬಹು ಆಕರ್ಷಕವಾಗಿ ಕಾಣುತ್ತವೆ. ಹಾಗೆ ದೇವಾಲಯದ ಒಳಾಂಗಣವು ಸೂಕ್ಷ್ಮ ಕಲೆಯ ಕೆತ್ತನೆಯಿಂದ ಕೂಡಿದೆ.ನಿಜಕ್ಕೂ ಆ ಶಿಲ್ಪಿಗಳ ಶ್ರಮ ಎಂತಹದು ಎಂಬುದನ್ನ ನಾವು ಅಂದಾಜಿಸುವುದು ಕಷ್ಟವೇ ಸರಿ.ಸುಮಾರು ೫೮ ವರ್ಷಗಳ ಪರಿಶ್ರಮದಿಂದ ಈ ದೇವಾಲಯ ಇಷ್ಟು ಸುಂದರವಾಗಿ ರೂಪುಗೊಳ್ಳಲು ಸಾಧ್ಯವಾಯಿತು.ಆದರೆ ದುರಾದೃಷ್ಟವಶಾತ್ ಪರಕೀಯರ ದಾಳಿಯಿಂದ ಅಲ್ಲಿನ ವಿಗ್ರಹಗಳೆಲ್ಲ ಭಿನ್ನಗೊಂಡು ತನ್ನ ಮೂಲ ರೂಪವನ್ನು ಕಳೆದು ಕೊಂಡಿದೆ. ಅದೇನೆ ಇದ್ದರೂ ಸಾವಿರಾರು ವರ್ಷಗಳಿಂದ ತನ್ನ ನೈಪುಣ್ಯತೆಯನ್ನು ಕಾಪಾಡಿಕೊಂಡು ಬಂದಿರುವ ಈ ದೇವಾಲಯ ನಿಜಕ್ಕೂ ಧಾರ್ಮಿಕವಾಗಿ, ಪ್ರವಾಸಿ ತಾಣವಾಗಿ, ಐತಿಹಾಸಿಕ ಕ್ಷೇತ್ರವಾಗಿ, ಕಲೆಯ ಆಗರವಾಗಿ ಉಳಿದಿರುವುದರೊಂದಿಗೆ, ತನ್ನ ಶಿಲ್ಪಗಳ

ಮೂಲಕ ಜಾನಪದ ಅಂಶಗಳ ಮೇಲೂ ಬೆಳಕು ಚೆಲ್ಲಿರುವುದರಿಂದ ಚೆನ್ನ ಕೇಶವ ದೇವಾಲಯವನ್ನೆ ಕ್ರೇಂದ್ರವಾಗಿರಿಸಿಕೊಂಡು ಜಾನಪದ ನೆಲೆಯಲ್ಲಿ ಮಹಾ ಸಂಶೋಧನಯನ್ನೆ ಕೈಗೊಳ್ಳ ಬಹುದಾಗಿದೆ. ಅದಕ್ಕೆ ಆಕರ ಸಾಮಾಗ್ರಿಯಂತು ಹೇರಳವಾಗಿ ಕಾಣಸಿಗುತ್ತವೆ. ಸಂಶೋಧಕ ಚಾತುರ್ಯತೆಯಿಂದ ಈ ಅಂಶಗಳನ್ನು ಹೊರ ತೆಗೆಯಬೇಕಾಗಿದೆ.

ಪ್ರತಿಯೊಂದು ಕ್ರಿಯೆಯ ಹಿಂದೆ ಪೂರ್ವ ನಿರ್ಧರಿತ ಕಲ್ಪನೆಯ ಯೋಜನೆ ಪ್ರೇರಕವಾಗಿರುತ್ತವೆ. ಅಂದರೆ ಈ ಒಂದು ಸಂಶೋಧನ ಪ್ರವಾಸದ ಹಿಂದೆ ಮಾರ್ಗದರ್ಶಕರೋರ್ವರು ನೀಡಿದ ಹಿತವಚನ ನನ್ನ ಅಂತರಾಳದ ಶೋಧಕನನ್ನು ಚಂಚಲಗೊಳಿಸಿ ಕುತೂಹಲಕ್ಕೆ ಪ್ರೇರೇಪಿಸಿತು. ಹೊಸದೊಂದನ್ನು ಹುಡುಕಲು ಅಣಿಗೊಳಿಸಿತು ಅದರ ಆಶಯದಂತೆ ಪಯಣವನ್ನು ಪೂರ್ಣಗೊಳಿಸಿದ ನನ್ನಲ್ಲಿ ಅಲ್ಲಿನ ಚಿತ್ರಣ ಮತ್ತಷ್ಟು ಹೊಸ ಪ್ರಶ್ನೆಗಳನ್ನು ಹುಟ್ಟು ಹಾಕಿದವು. ಇವು ಮುಂದಿನ ಸಂಶೋದನೆಗೆ ಹೊಸ ಚಿಂತನೆಗಳಿಗೆ ಸಾಕ್ಷಿಯಾಗಿವೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**

೧. ಕ್ಯಾತನಹಳ್ಳಿ ರಾಮಣ್ಣ, ಕ್ಷೇತ್ರಕಾರ್ಯದ ಹಾದಿಯಲ್ಲಿ, ಸಾಗರ್ ಪ್ರಕಾಶನ, ಮೈಸೂರು, ೨೦೧೩

೨. ಷ. ಶೆಟ್ಟರ್, ಸೋಮನಾಥಪುರ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೮

೩. ಡಾ. ಕೂ. ಸ. ಅಪರ್ಣ, ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೧

೪. ಕಲಾ ವೈಭವ, ಭಾರತ ಸರ್ಕಾರ, ಭಾರತೀಯ ಪುರಾತತ್ವ ಸರ್ವೇಕ್ಷಣ, ಬೆಂಗಳೂರು, ೨೦೨೦

೫. ಡಾ. ಶಿವಾನಂದ ಎಚ್. ಬಂಟನೂರ, ಕರ್ನಾಟಕ ಜನಪದ ಶಿಲ್ಪಕಲೆ, ಎಸ್ ಎಲ್ ಎನ್ ಪಬ್ಲಿಕೇಷನ್, ಬೆಂಗಳೂರು, ೨೦೧೮